

ಚಿನ್ನದ ಕಣಗಳನ್ನು ಹೊಂದಿರುವ ಬಂಡೆಗಳ ಪದರುಗಳ ಕ್ವಾರಿ



ಸಂಚಯಕ್ಕೆ ತಮ್ಮಂದಿರನ್ನು, ಹಿತೈಷಿಗಳನ್ನು ನಾಲ್ಕು ದಿಕ್ಕುಗಳಿಗೆ ಕಳುಹಿಸುತ್ತಾನೆ. ಆಗ ಧನುರ್ಧಾರಿ ವಿಕ್ರಮಾರ್ಜುನನು ಉತ್ತರ ದಿಕ್ಕಿಗೆ ತೆರಳುತ್ತಾನೆ.

ಆಗ ಅವನು ಮೇರು ಪರ್ವತದ ಕಣಿವೆಯಲ್ಲಿ ಏನು ಮಾಡಿದನೆನ್ನುವ ಭಾಗವು ಪಂಪ ಭಾರತದ ಆರನೆಯ ಆಶ್ವಾಸದಲ್ಲಿ ಮೂವತ್ತನೆಯ ಪದ್ಯದ ಅನಂತರದ ವಚನದಿಂದ ಮೂವತ್ತೆರಡನೇ ಚಂಪಕಮಾಲೆ ವೃತ್ತದವರೆಗೆ ಬರುತ್ತದೆ. ಆ ಭಾಗವು ಹೀಗಿದೆ:

"ವ || ಮೇರು ಪರ್ವತದ ತೆಂಕಣ ತಲ್ಪಲೊಳ್ ದ್ವಾದಶ ಯೋಜನ ಪ್ರಮಾಣಮಪ್ಪ ಜಂಬೂ ವೃಕ್ಷದ ಕೆಲದೊಳಡಸಿ ರಸದ ತೋರೆ ಪರಿವಂತೆ ಕನಕಗಿರಿಯನಲೆದು ಪರಿವ ಜಂಬೂನದವೆಂಬ ತೊರೆಯೊಳ್ ಪುಟ್ಟಿದ ಜಾಂಬೂನದಮೆಂಬ ಪೊನ್ನ ಪಾಸರೆಗಳಂ ಕಂಡು

ಕಂ || ಗಾಂಡೀವದ ಕೊಪ್ಪುಗಳೊಳ್ /
ಖಂಡಿಸಿ ತತ್ತಟದ ಕನಕ ರೇಣುವನವನಾ/
ಖಂಡಲ ತನಯನಸುಂಗೊಳೆ /
ಖಂಡಿಸಿದಂ ನಿಶಿತ ಪರಶು ಶರ ಸಮಿತಿಗಳಿಂ || **31** ||

ವ|| ಅಂತು ಕನಕ ರೇಣುಗಳ್ ಪುಟ್ಟಿದ ಪಾಸರೆಗಳುಮಂ ಕನಕದ ಪಿರಿಯ ಸೆಲೆಗಳುಮನೊಟ್ಟಿ ಬೆಟ್ಟಾಗಿ ಪುಂಜಿಸಿ

ಚಂ|| ಬರಿಸಿ ಘಟೋತ್ಕಚಂ ಬೆರಸು ದಾನವ ಸೇನೆಯನೀಗಳೀ ಬಲಂ/
ಬೆರಸಿವನಿಂತು ಪೊತ್ತು ನಡೆ ನಮ್ಮ ಪುರಕ್ಕೆನೆ ತದ್ಗಿರೀಂದ್ರ ಕಂ/
ದರ ಕನಕಾಚಳಂಗಳೆನಿತುಂಟನಿತಂ ತವೆ ಹೇಮ ರೇಣುಗ/
ಳ್ವೆರಸು ಕಡಂಗಿ ಪೊತ್ತು ನಡೆದತ್ತು ಘಟೋತ್ಕಚ ರೌದ್ರ ಸಾಧನಂ || **32** ||

ಮೇರು ಪರ್ವತದ ದಕ್ಷಿಣ ತಪ್ಪಲಿನಲ್ಲಿ ಒಂದು ಜಂಬೂವೃಕ್ಷವು ಹನ್ನೆರಡು ಯೋಜನ ವಿಸ್ತೀರ್ಣವನ್ನು ಅವರಿಸಿಕೊಂಡಿದೆ. ಅದರ ಕೆಳಗೆ ಬೆಟ್ಟವನ್ನು ಸೀಳಿಕೊಂಡು ಜಂಬುನದವೆಂಬ ತೊರೆಯು ಹರಿಯುತ್ತಿದೆ. ಆ ತೊರೆಯಲ್ಲಿ ಅರ್ಜುನನು ಚಿನ್ನದ ಹಾಸುಗಳನ್ನು ಕಾಣುತ್ತಾನೆ. ತೊರೆಯಲ್ಲಿ ಇದ್ದ ಚಿನ್ನದ ಗಟ್ಟಿಗಳನ್ನು ತನ್ನ ಬಿಲ್ಲಿನ ತುದಿಯಿಂದ ಎಬ್ಬಿ ತೆಗೆಯುತ್ತಾನೆ. ಚಿನ್ನದ ರೇಕುಗಳಿರುವ ಶಿಲೆಗಳಿಂದ ಚಿನ್ನವನ್ನು ಕೊಡಲಿ, ಬಾಣಗಳ ಸಹಾಯದಿಂದ ಹೊರತೆಗೆಯುತ್ತಾನೆ. ಸೈನಿಕರು ಅವನ್ನೆಲ್ಲಾ ರಾಶಿ ಮಾಡುತ್ತಾರೆ. ಘಟೋತ್ಕಚನಿಗೆ ಅವನ್ನು ಒಪ್ಪಿಸಿ ಇಂದ್ರಪ್ರಸ್ಥಕ್ಕೆ ಕಳುಹಿಸುತ್ತಾನೆ. ಇದು ಕಥಾಸಾರಾಂಶ.

ಇಲ್ಲಿರುವ ವಿವರಗಳನ್ನು ಪರಿಶೀಲಿಸಿದರೆ ಅರ್ಜುನನಿಗೆ ನದಿಯಲ್ಲಿ ಸಿಕ್ಕಿದೆ ಎಂದು ಪಂಪನು ಹೇಳಿರುವುದು, ನಾವು 'ನಗೆಟ್ಸ್' ಎಂದು ಕರೆಯುವ ಚಿನ್ನದ ಉಂಡೆ ಹಾಗೂ ಚಿನ್ನದ ರೇಕುಗಳನ್ನು.

ಪಂಪನು ಪೂರ್ವ ಕವಿಗಳ ಕೃತಿಗಳಲ್ಲಿ (ವೇದ, ಇತಿಹಾಸ, ಪುರಾಣಗಳಲ್ಲಿ) ಇವು ದಾಖಲಾಗಿರುವುದನ್ನು ಖಂಡಿತವಾಗಿಯೂ ಓದಿರುತ್ತಾನೆ. ಮತ್ತೊಂದು ಸಾಧ್ಯತೆಯೂ ಇದೆ. ಆ ಕಾಲಘಟ್ಟದಲ್ಲಿ ಯಾವುದಾದರೂ ತೊರೆಯಲ್ಲಿ ಚಿನ್ನದ ಗಟ್ಟಿ, ರೇಕುಗಳು ಇರುವುದನ್ನು ಆತ ನೋಡಿರಬಹುದೇ? ಬನವಾಸಿಯ ಹತ್ತಿರದ ತೊರೆಯಲ್ಲಿ ಅವನು ಚಿನ್ನವನ್ನು ಕಂಡಿರಬಹುದೇ? ಪಂಪನದು ಕನ್ನಡದ ಆದಿಕಾವ್ಯ. ಅವನ ಕಾಲ ಪ್ರ.ಶ. 902–950. ಆಗ ರಾಜನು ಚಿನ್ನದ ಉತ್ಪಾದನೆಗೆ ಯಾವುದಾದರೂ ಸೌಲಭ್ಯವನ್ನು ಏರ್ಪಡಿಸಿದ್ದನೆ? ಸಂಶೋಧಕರು ಇವುಗಳ ಬಗ್ಗೆ ಗಮನ ಹರಿಸಬೇಕು.

ಒಂದು ಪ್ರಮುಖ ವಿಚಾರ, ನಮಗೆ ಹೆಮ್ಮೆಯ ವಿಚಾರದ ಬಗ್ಗೆ ಗಮನ ಹರಿಸೋಣ. ಅಮೆರಿಕದಲ್ಲಿ ರೆಡ್ ಇಂಡಿಯನ್ನರನ್ನು ಆಕ್ರಮಿಸಿ ಲೂಟಿ ಹೊಡೆದವರು ಶ್ರೀಮಂತರಾಗಿ ಮೆರೆದರು. ನಮ್ಮಲ್ಲಿ ಧರ್ಮಜನ ಅನುಜರು ನಾಲ್ಕು ದಿಕ್ಕುಗಳಲ್ಲಿ ರಾಜರುಗಳಿಂದ ತಂದ ಐಶ್ವರ್ಯವನ್ನೆಲ್ಲ ರಾಜಸೂಯ ಯಾಗದ ಸಂದರ್ಭದಲ್ಲಿ ಬಡಬಗ್ಗರಿಗೆ, ನಿರ್ಗತಿಕರಿಗೆ ದಾನಮಾಡಿದರು; ಪುಣ್ಯಭೂಮಿಯ ಹೆಸರಿಗೆ ತಕ್ಕಂತೆ!

ಒಟ್ಟಿನಲ್ಲಿ ನಮ್ಮ ದೇಶದಲ್ಲೂ ಚಿನ್ನದ 'ನಗೆಟ್ಸ್' ಸಿಕ್ಕುತ್ತಿದ್ದುವು ಎನ್ನುವುದು ಬರಿಯ ಕವಿ ಕಲ್ಪನೆಯಲ್ಲ; ಅವರ ಅನುಭವದ ಮೂಸೆಯಿಂದ ಹೊರಬಂದ ಅಪ್ಪಟ ಚಿನ್ನ. ಅಂಥದನ್ನು ಕಣ್ಣಾರೆ ಕಂಡಿದ್ದು ಅದನ್ನು ಯಥಾವತ್ ಬರೆದಿರುವ ಸಾಧ್ಯತೆಗಳು ಹೆಚ್ಚು. ಇದರಿಂದ ನಮ್ಮ ದೇಶದ ಎಲ್ಲ ಹಳೆಯ ಕಾವ್ಯಗಳನ್ನು, ಅವುಗಳು ಸೂಚಿಸುವ ಸ್ಥಳಗಳನ್ನು, ಕಾಲವನ್ನು, 'ತೊರೆಗಳಲ್ಲಿ ಚಿನ್ನದ ಗಟ್ಟಿಗಳು, ಉಂಡೆಗಳು ಸಿಕ್ಕುತ್ತಿದ್ದುವೆ?' ಎಂಬ ದೃಷ್ಟಿಯಿಂದ ಮತ್ತೆ ಪರಿಶೀಲನೆ ನಡೆಸಬೇಕು. ಇದರಿಂದ ಅನೇಕ ಹೊಸ ವಿಚಾರಗಳು ಹೊರ ಬರುವ ಸಾಧ್ಯತೆಯಿದ್ದೇ ಇದೆ. ಹಿಂದೆ ಅಂಥ ಸ್ಥಳಗಳು ಶತ್ರುಗಳಿಗೆ ಗೊತ್ತಾಗಬಾರದೆಂದು ಕಾಡನ್ನು ಬೆಳೆಸಿ ಜನರು ಓಡಾಡದಂತೆ ತಡೆದಿರಬಹುದು. ಅಂಥ ಪ್ರದೇಶಗಳು ಸಿಕ್ಕಿದರೆ ದೇಶಕ್ಕೆ ಹೊಸ ಚಿನ್ನದ ನಿಕ್ಷೇಪ ದೊರಕಿದಂತಾಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**